O.S 187/13
DW-1

**ಸಾಕ್ಷಿಯನ್ನು ದಿನಾಂಕ 02-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ  ವಾದಿ ಪರ ಶ್ರೀ AMK ವಕೀಲರಿಂದಃ</u>**

**1.** ಮರಿನರಸಪ್ಪ ನನ್ನ ಮುತ್ತಾತ. ಮರಿನರಸಪ್ಪರವರನ್ನು ನಾನು ನೋಡಿರುವುದಿಲ್ಲ. ಸದರಿ ಮರಿನರಸಪ್ಪರವರಿಗೆ **4** ಜನ ಗಂಡುಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಆ ಪೈಕಿ ನನ್ನ ತಾತ ನರಸಪ್ಪನನ್ನು ಬಿಟ್ಟು ಉಳಿದವರನ್ನು ನೋಡಿರುತ್ತೇನೆ. ಮರಿನರಸಪ್ಪನ **4** ಜನ ಮಕ್ಕಳ ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಮರಿನರಸಪ್ಪನ **4** ಜನ ಮಕ್ಕಳು ಅವರು ಜೀವಿತಾವಧಿಯಲ್ಲಿ **100-150** ವರ್ಷಗಳ ಹಿಂದೆ ವಿಭಾಗವನ್ನು ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದಲ್ಲಿ ಮರಿನರಸಪ್ಪನ **4** ಜನ ಮಕ್ಕಳಿಗೂ **6** ಸರ್ವೆ ನಂಬರ್ ಗಳು ಜಂಟಿ ಆಗಿ ಬಂದಿರುತ್ತವೆ. ನನ್ನ ತಾತ ನರಸಪ್ಪರವರಿಗೆ ದೊಡ್ಡನರಸಪ್ಪ ಮಗ. ನರಸೀಯಪ್ಪನಿಗೆ ಜಿ ನರಸಯ್ಯ ಎಂಬ ಒಬ್ಬ ಮಗ. ಚಿಕ್ಕನರಸಪ್ಪನಿಗೆ ಪುಟ್ಟಯ್ಯ ಎಂಬ ಒಬ್ಬ ಮಗ. ಸದರಿ ಪುಟ್ಟಯ್ಯರವರು ವಾದಿಯ ಗಂಡ ಎಂದರೆ ಸರಿ. ಕುಂಬಯ್ಯನಿಗೆ **7** ಜನ ಮಕ್ಕಳಿದ್ದು ಆ ಪೈಕಿ **5** ಜನ ಮೃತಪಟ್ಟಿರುತ್ತಾರೆ. ಕುಂಬಯ್ಯನ ಮಗ **3** ನೇ ಪ್ರತಿವಾದಿ. ಕುಂಬಯ್ಯನ ಕುಟುಂಬದ ವ್ಯವಹಾರವನ್ನು ಅವರ ಜೀವಿತಾವಧಿಯಲ್ಲಿ ಅವರೇ ನೋಡಿಕೊಳ್ಳುತ್ತಿದ್ದು ಅವರು ಮೃತಪಟ್ಟನಂತರ **3** ನೇ ಪ್ರತಿವಾದಿ ಅವರ ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿರುತ್ತಾರೆಂದರೆ ಸರಿ. ನರಸೀಯಪ್ಪ ಕುಟುಂಬದ ವ್ಯವಹಾರಗಳನ್ನು **2** ನೇ ಪ್ರತಿವಾದಿ ನೋಡಿಕೊಳ್ಳುತ್ತಿರುತ್ತಾರೆಂದರೆ ಸರಿ. ದೊಡ್ಡನರಸಪ್ಪನ ಕುಟುಂಬದ ವ್ಯವಹಾರವನ್ನು ನಾನು ಮತ್ತು ನನ್ನ ತಮ್ಮ ನೋಡಿಕೊಳ್ಳುತ್ತೇವೆಂದರೆ ಸರಿ. ಈ ಪ್ರಕರಣದಲ್ಲಿ ಮರಿನರಸಪ್ಪನ **4** ಜನ ಮಕ್ಕಳ ವಂಶಸ್ಥರಲ್ಲಿ ಒಬ್ಬೊಬ್ಬರು ಪಕ್ಷಗಾರರಾಗಿರುತ್ತಾರೆಂದರೆ ಸರಿ.

**2.** ವಿಭಾಗಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. **2004** ರ ಪಂಚಾಯಿತಿ ಪಾರಿಕತ್ತನ್ನು ನಾನು ನೋಡಿರುತ್ತೇನೆ. **2004** ರ ಪಂಚಾಯಿತಿ ಪಾರಿಕತ್ತಿನಲ್ಲಿ **4** ಸರ್ವೆ ನಂಬರ್ ಗಳನ್ನು ಭಾಗಮಾಡಿಕೊಂಡಿರುತ್ತೇನೆ. ದಾವಾ ಎ ಷೆಡ್ಯೂಲ್ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. **2004** ರ ಪಂಚಾಯಿತಿ ಪಾರಿಕತ್ತಿನ ಪ್ರಕಾರ ಖಾತೆ ಆಗಿರುವುದಿಲ್ಲ, ಜಂಟಿಯಾಗಿರುತ್ತದೆ. ಪಂಚಾಯಿತಿ ಪಾರಿಕತ್ತಿನ ಪ್ರಕಾರ ಪ್ರತ್ಯೇಕವಾಗಿ ಪೋಡಾಗಿ ಖಾತೆಗಳು ಆಗಿರುವುದಿಲ್ಲ. ದಾವಾ ಆಸ್ತಿಗಳನ್ನು ಬಿಟ್ಟು ಬೇರೆ ನಮ್ಮ ಕುಟುಂಬಕ್ಕೆ ಸೇರಿದ ಭಾಗ ಮಾಡಿಕೊಳ್ಳಬೇಕಾದ ಆಸ್ತಿಗಳು ಇರುವುದಿಲ್ಲ. ಸರ್ವೆ ನಂಬರ್ **114** ವಾದಿ ಹೆಸರಿನಲ್ಲಿ, ಸರ್ವೆ ನಂಬರ್ **115** ಜಿ ನರಸಯ್ಯ, ಸರ್ವೆ ನಂಬರ್ **148** ಕುಂಬಯ್ಯ ಹೆಸರಿನಲ್ಲಿ, ಸರ್ವೆ ನಂಬರ್ **156** ನನ್ನ ತಂದೆ ಹೆಸರಿನಲ್ಲಿದ್ದು , ಈಗ ನನ್ನ ಹೆಸರಿನಲ್ಲಿರುತ್ತದೆ. ಸರ್ವೆ ನಂಬರ್ **156** ಒಟ್ಟು

ಕುಟುಂಬದ ಆಸ್ತಿ ಎಂದರೆ ಸರಿಯಲ್ಲ, ವಿಭಾಗ ಮಾಡಿಕೊಂಡ ನಂತರ ನಮ್ಮ ತಂದೆಗೆ **1979-80** ರಲ್ಲಿ ಬಂದಂತಹ ಪ್ರತ್ಯೇಕ ಆಸ್ತಿ ಆಗಿರುತ್ತದೆ. **2004** ರ ಪಂಚಾಯಿತಿ ಪಾರಿಕತ್ತನ್ನು ಹೊರತುಪಡಿಸಿ ಬೇರೆ ಯಾವುದೇ ವಿಭಾಗ ಪತ್ರ ಇರುವುದಿಲ್ಲ. ನನ್ನ ಹಾಗೂ ವಾದಿ ಮತ್ತು ಇತರ ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆಗಿದೆ ಎಂದು ತೋರಿಸುವ ಸಲುವಾಗಿ ದಾಖಲೆಗಳು ಇರುತ್ತವೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

**3.** ಈ ದಾವೆಯಲ್ಲಿ ವಾದಿ ಕುಟುಂಬದ ಸದಸ್ಯರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಿದ್ದಾರೆಂದರೆ ಸರಿ. ವಾದಿಯು ನಮ್ಮ ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತಾರೆಂದರೆ, ನನ್ನ ತಂದೆಗೆ ಸೇರಿದ ಸರ್ವೆ ನಂ **156** ನ್ನು ಸೇರಿಸಿರುತ್ತಾರೆ, ಸರ್ವೆ ನಂಬರ್ **114, 115** ಮತ್ತು **148** ಕುಂಬಯ್ಯ, ವಾದಿ, ಜಿ ನರಸಯ್ಯ ರವರಿಗೆ ಮಂಜೂರಾದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ದಾವಾ ಎ ಷೆಡ್ಯೂಲ್ ಆಸ್ತಿಗಳಲ್ಲಿ ಕಾಣಿಸಿರುವ **1** ರಿಂದ **6** ನೇ ಆಸ್ತಿಗಳಲ್ಲಿ ವಿಭಾಗ ಮಾಡಲು ನನ್ನದೇನು ಅಭ್ಯಂತರ ಇರುವುದಿಲ್ಲ. ಸರ್ವೆ ನಂ **156** ನಮ್ಮ ಒಟ್ಟು ಕುಟುಂಬದ ಆಸ್ತಿ ಆಗಿದ್ದು, ಸದರಿ ಆಸ್ತಿಯಲ್ಲಿ ವಾದಿಗೆ ಭಾಗ ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S 187/13

DW-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.

*Koratagere.*